**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 9155/2021**

ಹೆಸರು : ಮಾರಪ್ಪ

ತಂದೆಯ ಹೆಸರು : ವೆಂಕಟರಾಯಪ್ಪ

ವಯಸ್ಸು : 42

ಉದ್ಯೋಗ : ಕೂಲಿ ಕೆಲಸ

ವಾಸ : ಮಾಸ್ತೇನಹಳ್ಳಿ.

CW-5, PW-3

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 23.08.2024**

**ಮುಖ್ಯ ವಿಚಾರಣೆ : ಎಪಿಪಿಯುವರಿಂದಃ**

ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ದಿಃ08.09.2021 ರಂದು ಅಕ್ಕುಪೇಟೆ ಗ್ರಾಮದ, ಚಾಸಾ-11 ರವರ ಮನೆಯ ಮುಂದೆ ಹಾಕಿರುತ್ತೇನೆ. ಚಾಸಾ-1 ಮತ್ತು 1 ನೇ ಆರೋಪಿಯ ವಿಚಾರವಾಗಿ ಸಹಿ ಮಾಡಿರುತ್ತೇನೆ. ನಿಪಿ-2 ನ್ನು ಬೆಳಿಗ್ಗೆ 11.00-11.30 ಗಂಟೆ ವರೆಗೆ ಮಾಡಿರುತ್ತಾರೆ. ಆ ಸಂದರ್ಬದಲ್ಲಿ ನಾನು ಮತ್ತು ಚಾಸಾ-4 ರವರು ಇದ್ದೆವು. ನಿಪಿ-2 ಮಹಜರ್ ಸಮಯದಲ್ಲಿ ನನ್ನ ಸಮಕ್ಷಮದಲ್ಲಿ ಲಜ್ಞ ಪತ್ರಿಕೆ ಪೋಟೋಗಳನ್ನು ಸ್ವಾಧೀನ ಪಡಿಸಿಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-3 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ವಿ ಜಿ ಆರೋಪಿ ಪರ ವಕೀಲರಿಂದಃ**

ಚಾಸಾ-11 ರವರ ಮನೆಯ ಬಳಿ ನನ್ನನ್ನು ಚಾಸಾ-2 ರವರ ತಂದೆ ಕರೆದುಕೊಂಡು ಹೋಗಿರುತ್ತಾರೆ. ನಿಪಿ-2 ರಲ್ಲಿರುವ ವಿಚಾರವನ್ನು ಪೋಲಿಸರು ಬರೆದುಕೊಂಡಿರುತ್ತಾರೆ. ನಿಪಿ-2 ರಲ್ಲಿರುವ ಎಲ್ಲಾ ವಿಚಾರವನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಆ ಸಂದರ್ಬದಲ್ಲಿ ನಾನು ಚಾಸಾ-2, 4 ಮತ್ತು 6 ರವರು ಇದ್ದೆವು. ನಿಪಿ-2 ಕ್ಕೆ ನಾನು, ಚಾಸಾ-2, 4 ಮತ್ತು 6 ರವರು ಸಹಿ ಮಾಡಿರುತ್ತೇವೆ. ನಿಪಿ-3 ರಿಂದ 7 ನ್ನು ಚಾಸಾ-1 ರವರು ಹಾಜರು ಪಡಿಸಿರುತ್ತಾರೆ. ಚಾಸಾ-2 ನನ್ನ ಚಿಕ್ಕಪ್ಪ. ನಿಪಿ-2 ರಲ್ಲಿ ಬರೆದಿರುವ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನಿಪಿ-2 ರಲ್ಲಿ

ಬರೆದಿರುವ ವಿಚಾರಗಳು ಗೊತ್ತಿಲ್ಲದೇ ಇದ್ದರೂ, ಚಾಸಾ-2 ನನ್ನ ಸಂಬಂದಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯು, ದೇವನಹಳ್ಳಿ**

**ಸಿಸಿ ನಂ. 9155/2021**

ಹೆಸರು ಃ ಅಮಿಡಪ್ಪ

ತಂದೆಯ ಹೆಸರು ಃ ಯರಪ್ಪ

ವಯಸ್ಸು ಃ 74

ಉದ್ಯೋಗ ಃ ವ್ಯವಸಾಯ

ವಾಸ ಃ ಮಾಸ್ತೇನಹಳ್ಳಿ.

CW-2, PW-2

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 21.06.2024**

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

1. ಚಾಸಾ-1 ನನ್ನ ಮಗಳು, ಚಾಸಾ-3 ನನ್ನ ಹೆಂಡತಿ, ಚಾಸಾ-6 ರಿಂದ 11 ರವರ ಪರಿಚಯ ಇರುತ್ತದೆ. 1 ನೇ ಆರೋಪಿ ನನ್ನ ಅಳಿಯ, ಉಳಿದವರು ನನ್ನ ಮಗಳ ಮಾವ ಅತ್ತೆ ಹಾಗೂ ಮೈದ ಹಾಗೂ ಆತನ ಹೆಂಡತಿ. ನನಗೆ 3 ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಸುಮಿತ್ರ, ಅಮರವಾತಿ, ಅನಿತ. ಚಾಸಾ-1 ರವರನ್ನು 1 ನೇ ಆರೋಪಿಯ ಜೊತೆ 2012 ರಲ್ಲಿ ಕೈವಾರ ತಾತಯ್ಯ ಕೈವಾರ ಮಂಟಪದಲ್ಲಿ ಮದುವೆ ಮಾಡಿ ಕೊಟ್ಟಿರುತ್ತೇನೆ. ಆ ಸಂದರ್ಬದಲ್ಲಿ ಚಾಸಾ-1 ರವರಿಗೆ ನಕ್ಲೇಸ್, ಹಾರ, ಉಂಗುರ, 2 ಕಿವಿ ಓಲೆಗಳು 2 ಜೊತೆ ಮತ್ತು ಸಣ್ಣ ಪುಟ್ಟ ವಸ್ತುಗಳನ್ನು ಕೊಟ್ಟಿರುತ್ತೇನೆ. 1 ನೇ ಆರೋಪಿಗೆ 1 ಚೈನು, ಉಂಗುರ ಮತ್ತು ಗಾಡಿಯನ್ನು ಕೊಟ್ಟಿರುತ್ತೇನೆ. ಇದರ ಜೊತೆಗೆ ಮದುವೆಯನ್ನು ನಾನೇ ಮಾಡಿಕೊಟ್ಟಿರುತ್ತೇನೆ. ಮದುವೆ ಆದ ನಂತರ ಚಾಸಾ-1 ಮತ್ತು ಆರೋಪಿಗಳು 3 ವರ್ಷಗಳ ಕಾಲ ಚೆನ್ನಾಗಿ ಇದ್ದರು. ನಂತರ ನನ್ನ ಮಗಳಿಗೆ ಮಕ್ಕಳು ಆಗದೇ ಇರುವ ಕಾರಣ ಬೇರೆ ಮದುವೆ ಮಾಡಿಕೊಳ್ಳಬೇಕು ಎಂದು ಜಗಳ ಪ್ರಾರಂಬಿಸಿದರು ಹಾಗೂ ಚಾಸಾ-1 ರವರಿಗೆ ಕಿರುಕುಳ ನೀಡಲು ಪ್ರಾರಂಬಿಸಿದರು. ನಂತರ ಆರೋಪಿಗಳಲ್ಲೆರೂ ಸೇರಿ ಚಾಸಾ-1 ರವರನ್ನು ನಿಮ್ಮ ತಂದೆಯ ಆಸ್ತಿ ಮಾರಾಟ ಮಾಡಿ ನನಗೆ 2 ನೇ ಮದುವೆ ಮಾಡು ಎಂದು

ಕೇಳಿದರು. ನಂತರ ಚಾಸಾ-1 ಬಂದು ಆಸ್ತಿಯನ್ನು ಮಾರಾಟ ಮಾಡುವಂತೆ ನನ್ನನ್ನು ಕೇಳಿದಾಗ ನಾನು ಆಗುವುದಿಲ್ಲ ಎಂದು ಹೇಳಿರುತ್ತೇನೆ. ನಂತರ ನಮ್ಮ ಮತ್ತು ಆರೋಪಿಗಳ ನಡುವೆ ನ್ಯಾಯ ಪಂಚಾಯಿತಿ ಆಗಿರುತ್ತದೆ. ಆ ಪಂಚಾಯಿತಿಯಲ್ಲಿ ಆರೋಪಿಗಳು ಇನ್ನು ಮುಂದೆ ಸರಿಯಾಗಿ ನೋಡಿಕೊಳ್ಳುವುದಾಗಿ ಹೇಳಿದ್ದರು. ನಂತರ 3 ದಿನಕ್ಕೆ ಚಾಸಾ-1 ನನಗೆ ದೂರವಾಣಿ ಕರೆ ಮಾಡಿ ಈಗಲೂ ಸಹ ಆರೋಪಿಗಳು ಅದೇ ರೀತಿ ಹೇಳುತ್ತಿದ್ದಾರೆ ಎಂದು ಹೇಳಿದರು. ಪುನಃ ನಾನು ಆರೋಪಿಗಳ ಮನೆಗೆ ಹಿರಿಯನ್ನು ಕರೆದುಕೊಂಡು ಬಂದು ನ್ಯಾಯಾ ಪಂಚಾಯಿತಿ ಮಾಡಿ ಹೋಗಿರುತ್ತೇವೆ ನಂತರದಲ್ಲಿಯೂ ಸಹ ಆರೋಪಿಗಳು ಚಾಸಾ-1 ರವರಿಗೆ ಹೊಡೆದಿರುತ್ತಾರೆ. ನಂತರ ಚಾಸಾ-1 ರವರಿಗೆ ಕೊಲೆ ಮಾಡುವುದಾಗಿ ನನ್ನ ಸಮಕ್ಷಮದಲ್ಲಿ ಬೆದರಿಕೆ ಹಾಕಿದರು. ನಂತರ ಆರೋಪಿಗಳು ಆಸ್ತಿ ಮಾರಾಟ ಮಾಡದೇ ಇದ್ದರೇ ನಿನ್ನ ಮಗಳನ್ನು ಕರೆದುಕೊಂಡು ಹೋಗು ಎಂದು ಹೇಳಿದರು. ಆ ನಂತರ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ವರದಕ್ಷಿಣೆ ಕಿರುಕುಳ ನೀಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎ ಜಿ ಆರೋಪಿ ಪರ ವಕೀಲರಿಂದಃ**

1. ನಾನು ಯಾವುದೇ ವಿದ್ಯಾಬ್ಯಾಸ ಮಾಡಿರುವುದಿಲ್ಲ. ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೇನೆ ಎಂದರೆ ಸರಿ. ಮದುವೆ ಆದ ನಂತರ ಚಾಸಾ-1 ಮತ್ತು ಆರೋಪಿಗಳು 9 ವರ್ಷ ಚೆನ್ನಾಗಿ ಇದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು 1 ನೇ ಆರೋಪಿ ಹಕ್ಕು ಪೇಟೆಯಲ್ಲಿ ಸಂಸಾರ ಮಾಡುತ್ತಿದ್ದರು ಎಂದರೆ ಸರಿ. ಆ ರೀತಿ ಮನೆಯನ್ನು ಬೋಗ್ಯಕ್ಕೆ ಪಡೆದುಕೊಂಡು ವಾಸವಾಗಿದ್ದರು ಎಂದರೆ ಸರಿ. ಅದೇ ಮನೆಯಲ್ಲಿ ಇಂದಿಗೂ ಸಹ 1 ನೇ ಆರೋಪಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಚಾಸಾ-1 ರವರಿಗೆ ಮಕ್ಕಳಾಗಲಿಲ್ಲ ಎಂದು ಕಿರುಕುಳ ನೀಡಿದ್ದರು ಎಂದು ಯಾವುದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ರಾಜ ರಾಜೇಶ್ವರಿ ಆಸ್ಪತ್ರೆಯಲ್ಲಿ ಆರೋಪಿಗಳು ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿ. ಆ ಚಿಕಿತ್ಸೆ ಲ್ಲಿ ನನ್ನ ಮಗಳಿಗೆ ಸಮಸ್ಯೆ ಇದೆ ಎಂದು ಗೊತ್ತಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಜಮೀನು ಮಾರಾಟ ಮಾಡುವಂತೆ ಹೇಳಿರುವುದಿಲ್ಲ ಅದು ಕಟ್ಟು ಕತೆ ಎಂದರೆ ಸರಿಯಲ್ಲ. 1 ನೇ ಆರೋಪಿ ಏರ್ ಪೋರ್ಟ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ

ಸರಿ. ಚಾಸಾ-1 ರವರು ಕಿರುಕುಳದ ಬಗ್ಗೆ ನನಗೆ ದೂರವಾಣಿ ಮೂಲಕ ತಿಳಿಸಿದ್ದರು. ನ್ಯಾಯಾ ಪಂಚಾಯಿತಿಯನ್ನು ಆರೋಪಿಗಳ ಮನೆಯಲ್ಲಿ ಮಾಡಿರುತ್ತಾರೆ. ಆರೋಪಿಗಳ ಗಮನಕ್ಕೆ ಬರದಂತೆ ಚಾಸಾ-1 ರವರನ್ನು ಮನೆಗೆ ಕರೆದುಕೊಂಡು ಹೋದೆ ಎಂದರೆ ಸರಿ.

2. 2 ಮತ್ತು 3 ನೇ ಆರೋಪಿ ಗೌರಿಬಿದರೂನಲ್ಲಿ ಹೊಸೂರಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 5 ನೇ ಆರೋಪಿ ಬೇರೆ ಕಡೆ ವಾಸವಾಗಿದ್ದಾರೆ ಎಂದರೆ ಸರಿ. ಆ ಕಾರಣದಿಂದ ಮಾನಸಿಕವಾಗಿ ಹಿಂಸೆ ನೀಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆಭರಣಗಳು ಚಾಸಾ-1 ರವರ ಬಳಿ ಇದೆ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಆಭರಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ದೂರನ್ನು 3 ತಿಂಗಳ ಮೊದಲೇ ತಯಾರು ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ದೂರನ್ನು ಚಾಸಾ-1 ರವರು ಕೊಟ್ಟಿರುವುದಿಲ್ಲ ನಾನೇ ಕೊಟ್ಟಿದ್ದೇನೆ ಎಂದರೆ ಸರಿ. ನಾನು ರಾಜಕೀಯ ಪ್ರಭಾವ ಬಳಿಸಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 9155/2021**

ಹೆಸರು : ಅಮರಾವತಿ

ಗಂಡನ ಹೆಸರು : ಅಮರನಾಥ್

ವಯಸ್ಸು : 32

ಉದ್ಯೋಗ : ಗೃಹಿಣಿ
ವಾಸ : ಮಾಸ್ತೇನಹಳ್ಳಿ.

CW-1, PW-1

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 16.02.2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದ:**

1. ಚಾಸಾ-2 ನನ್ನ ತಂದೆ, ಚಾಸಾ-3 ನನ್ನ ತಾಯಿ, ಚಾಸಾ-6 ರಿಂದ 11 ರವರ ಪರಿಚಯ ಇರುತ್ತದೆ. 1 ನೇ ಆರೋಪಿ ನನ್ನ ಗಂಡ, ಉಳಿದವರು ನನ್ನ ಮಾವ ಅತ್ತೆ ಹಾಗೂ ಮೈದ ಹಾಗೂ ಆತನ ಹೆಂಡತಿ. ದಿ:11.03.2012 ರಂದು ನನ್ನ ಮತ್ತು 1 ನೇ ಆರೋಪಿಯ ಮದುವೆ ಕೈವಾರ ಕ್ಷೇತ್ರದ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆ ಸಂದರ್ಬದಲ್ಲಿ ನನ್ನ ತಂದೆ ತಾಯಿಗಳು ಆರೋಪಿಗಳಿಗೆ 35 ಗ್ರಾಂ ಚಿನ್ನದ ಕುತ್ತಿಗೆ ಸರ, ನನಗೆ 30 ಗ್ರಾಂ 30 ಗ್ರಾಂ ಸರ, 25 ಗ್ರಾಂ ಕಿವಿಗೆ ಬೇಕಾದ ಆಭಾರಣ, 5 ಗ್ರಾಂ ನ ಉಂಗುರ, ಆರೋಪಿಗೆ 20 ಗ್ರಾಂ ಬಂಗಾರದ ಆಭಾರಣ ಮತ್ತು 6 ಗ್ರಾಂ ಉಂಗುರವನ್ನು ನೀಡಿರುತ್ತಾರೆ. ಮದುವೆ ಸಂದರ್ಬದಲ್ಲಿ ಆರೋಪಿಗಳು ದ್ವಿಚಕ್ರ ವಾಹನವನ್ನು ಕೊಡಿಸುವಂತೆ ಕೇಳಿದ ಕಾರಣ ನನ್ನ ತಂದೆ ತಾಯಿಗಳು ಸ್ಪ್ಲೆಂಡರ್ ಪ್ಲಸ್ ದ್ವಿಚಕ್ರ ವಾಹನವನ್ನು ಕೊಡಿಸಿರುತ್ತಾರೆ ಹಾಗೂ ನಮ್ಮ ಸಂಸಾರಕ್ಕೆ ಬೇಕಾದ ಮನೆಯ ಗೃಹಪೋಯೋಗಿ ವಸ್ತುಗಳು ಸಹ ನನ್ನ ತಂದೆ ತಾಯಿಗಳು ಕೊಡಿಸಿರುತ್ತಾರೆ.

2. ಮದುವೆ ಆದ ನಂತರ ದೇವನಹಳ್ಳಿಯಲ್ಲಿ ಹಕ್ಕುಪೇಟೆಯಲ್ಲಿ ನಾನು ಮತ್ತು ಆರೋಪಿಗಳು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವು. ಮದುವೆ ಆದ ನಂತರ ನನಗೆ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ 1 ನೇ ಆರೋಪಿ ನಾನು ಬೇರೆ ವಿವಾಹ ಮಾಡಿಕೊಳ್ಳುತ್ತೇನೆ ಎಂದು ಕಿರುಕುಳ ನೀಡಲು ಪ್ರಾರಂಬಿಸಿದರು. ನಂತರ 1 ನೇ ಆರೋಪಿ ನೀನು ವಿಚ್ಚೇದನ ಅರ್ಜಿಗೆ ಸಹಿ ಮಾಡದೇ ಇದ್ದರೆ ನಿನ್ನ ಮೇಲೆ ಕಲ್ಲು ಎತ್ತು ಹಾಕುತ್ತೇನೆ ಎಂದು ಬೆದರಿಸಿರುತ್ತಾರೆ. ಆ ರೀತಿ ಮಾಡಲು ಉಳಿದ ಆರೋಪಿಗಳು 1 ನೇ ಆರೋಪಿಗೆ ಪ್ರಚೋದನೆಯನ್ನು ನೀಡಿರುತ್ತಾರೆ. ನಂತರ ಆರೋಪಿಯು ನನಗೆ ಕುತ್ತಿಗೆಯನ್ನು ಹಿಡಿದು ಉಸಿರುಗಟ್ಟಿಸಿರುತ್ತಾರೆ. ಈ ವಿಚಾರವನ್ನು ನನ್ನ ತಂದೆ ತಾಯಿಗಳಿಗೆ ಹೇಳಿದಾಗ ನನ್ನ ತಂದೆ ತಾಯಿಗಳು ಬಂದು ನ್ಯಾಯಾ ಪಂಚಾಯಿತಿ ಮಾಡಿರುತ್ತಾರೆ. ಆ ರೀತಿ ಪಂಚಾಯಿತಿ ಆದ ನಂತರದಲ್ಲಿ ಹೆಚ್ಚಿನ ಕಿರುಕುಳವನ್ನು ನೀಡುತ್ತಿದ್ದರು. ನಂತರ ನನ್ನ ಅತ್ತೆ ಮಾವ ನೀನು ವಿಚ್ಚೇದನಕ್ಕೆ ಸಹಿ ಮಾಡು ನಿನ್ನ ಗಂಡ ಬೇರೆ ಮದುವೆ ಮಾಡಿಕೊಂಡು ಎಲ್ಲಾದರೂ ಚೆನ್ನಾಗಿ ಇರಲಿ ನೀನು ನಮ್ಮನ್ನು ಸಾಕಿಕೊಂಡು ಇಲ್ಲೇ ಇರು ಎಂದು ಹೇಳುತ್ತಿದ್ದರು. ಆ ಕಾರಣದಿಂದ 1 ನೇ

ಆರೋಪಿ ನೀನು ಹೋಗಿ ರೈಲಿಗೆ ಸಿಲುಕಿಕೊಂಡು ಸತ್ತು ಹೋಗು ಎಂದು ಹೇಳುತ್ತಿದ್ದರು. ನನ್ನ ತಂದೆ ತಾಯಿಗೆ 3 ಜನ ಹೆಣ್ಣು ಮಕ್ಕಳಿದ್ದು ಆ ಕಾರಣದಿಂದ 1 ನೇ ಆರೋಪಿ ನನಗೆ ನನ್ನ ತಂದೆ ತಾಯಿ ಮನೆಗೆ ಹೋಗಿ ನಿನ್ನ ಆಸ್ತಿಯ ಭಾಗ ತೆಗೆದುಕೊಂಡು ಬಂದು ಮಾರಾಟ ಮಾಡಿ ಹಣ ಕೊಡು ಎಂದು ಹೇಳುತ್ತಿದ್ದರು. ಆರೋಪಿಗಳು ನನ್ನ ಎಲ್ಲಾ ಚಿನ್ನಾಭರಣಗಳನ್ನು ಎತ್ತಿಕೊಂಡಿರುತ್ತಾರೆ ಅದನ್ನು ವಾಪಸ್ಸು ನೀಡಿರುವುದಿಲ್ಲ. ಆಸ್ಪತ್ರೆಗೆ ಹೋಗಿ ನಾವು ಚಿಕಿತ್ಸೆ ಪಡೆದುಕೊಂಡಾಗ ನನಗೆ ಗರ್ಭದಾರಣೆ ಆಗಲು ಒಂದೇ ಟ್ಯೂಬ್ ಇರುವ ಕಾರಣ ನನ್ನ ಗಂಡ ಅಂದರೆ 1 ನೇ ಆರೋಪಿ ನಿನಗೆ ಮಕ್ಕಳಾಗುವುದಿಲ್ಲ, ನಿನಗೆ ಮಕ್ಕಳಾಗದೇ ಇದ್ದರೇ ನೀನು ನಾಯಿಯ ತರ ನಮ್ಮ ಮನೆಯಲ್ಲಿ ಇರಬೇಕು ನಿನಗೆ ನಾಯಿಗೆ ಊಟ ಹಾಕುವ ರೀತಿಯಲ್ಲಿ ಊಟ ಹಾಕುತ್ತೇವೆ ಎಂದು ಅವಾಚ್ಯವಾಗಿ ಬೈಯುತ್ತಿದ್ದರು. ನಂತರ 1 ನೇ ಆರೋಪಿ ನನಗೆ ಮಾನಸಿಕವಾಗಿ ಹಿಂಸೆ ನೀಡಿ ದೈಹಿಕವಾಗಿ ಹಲ್ಲೆ ಮಾಡುತ್ತಿದ್ದರು. ನನಗೆ ಶಸ್ತ್ರ ಚಿಕಿತ್ಸೆ ಆಗಿರುವ ಕಾರಣ ಓಡಾಡಲು ಆಗುವುದಿಲ್ಲ ಮತ್ತು ಕೆಲಸವನ್ನು ಮಾಡಲು ಆಗುವುದಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೋಲಿಸರು ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-4 ಮತ್ತು 5 ರವರು ಹಾಜರಿದ್ದರು. ಆ ರೀತಿ ಮಹಜರ್ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರಿಗೆ ನಾನು ಮದುವೆಯ ಪೋಟೊಗಳು ಆಸ್ಪತ್ರೆಯ ಬಿಲ್ಲು ಹಾಗೂ ಒಡವೆಗಳ ದಾಖಲಾತಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಮದುವೆ ಆಮಂತ್ರಣ ಪತ್ರವನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-3 ಎಂದು, 4 ಪೋಟೊಗಳನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-4 ರಿಂದ 7 ಎಂದು, 1 ಬಿಲ್ ನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು 8(ಎ) ಎಂದು ಗುರುತಿಸಲಾಯಿತು. ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ವರದಕ್ಷಿಣೆ ಕಿರುಕುಳ ನೀಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎ ಜಿ ಆರೋಪಿ ಪರ ವಕೀಲರಿಂದಃ**

1. ನಾನು ಡಿಎಡ್ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಮತ್ತು 1 ನೇ ಆರೋಪಿಯ

ಮದುವೆ ಗುರು ಹಿರಿಯರು ನಿಶ್ಚಯಿಸಿದ ಮದುವೆ ಆಗಿರುತ್ತದೆ. ನನ್ನ ತವರು ಮನೆ ಶ್ರೀನಿವಾಸಪುರ ತಾಲ್ಲೂಕು ಮಾಸ್ತೇನಹಳ್ಳಿ ಗ್ರಾಮ. ಆರೋಪಿಗಳ ಊರು ಗೌರಿಬಿದನೂರು ತಾಲ್ಲೂಕು ಹೊಸೂರು ಗ್ರಾಮ. ನಾನು ಮತ್ತು 1 ನೇ ಆರೋಪಿ ದೇವನಹಳ್ಳಿ ಯಲ್ಲಿ ಮದುವೆಯಾದ ದಿನದಿಂದಲೂ ವಾಸವಾಗಿರುತ್ತೇನೆ. ಮದುವೆ ಆದ ದಿನದಿಂದಲೂ ನಾನು ಮತ್ತು 1 ರಿಂದ 3 ನೇ ಆರೋಪಿಗಳು ವಾಸವಾಗಿದ್ದೆವು. ನನಗೆ ಮಕ್ಕಳಾಗಲಿಲ್ಲ ಎಂದು ಮೊದಲಿಗೆ ಸಣ್ಣ ಪುಟ್ಟ ಆಸ್ಪತ್ರೆಗಳಲ್ಲಿ ತೋರಿಸುತ್ತಿದ್ದೆವು ನಂತರ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇವೆ. 2 ಮತ್ತು 3 ನೇ ಆರೋಪಿಗಳು ಹೊಸೂರು ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿಗಳು ಹಕ್ಕುಪೇಟೆಯಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಮನೆ ಪಕ್ಕದಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಸಂಸಾರದಲ್ಲಿ 4 ಮತ್ತು 5 ನೇ ಆರೋಪಿಗಳ ಪಾತ್ರ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಮದುವೆಗೆ ಆರೋಪಿಗಳು ಒತ್ತಾಯ ಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಕುತ್ತಿಗೆ ಹಿಸುಕುತ್ತಿದ್ದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನನ್ನು ಸಾಯಿಸಲು ಪ್ರಯತ್ನ ಮಾಡಿದ್ದಾರೆ ಎಂದು ಕಟ್ಟು ಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾ ಪಂಚಾಯಿತಿ ದೇವನಹಳ್ಳಿಯಲ್ಲಿ, ಊರಿನಲ್ಲಿ ಮತ್ತು ಪೋಲಿಸ್ ಠಾಣೆಯಲ್ಲಿ ಆಗಿರುತ್ತದೆ. ನ್ಯಾಯಾ ಪಂಚಾಯಿತಿ ಗೌರಿಬಿದನೂರು ಮತ್ತು ಕೋಲಾರ ನ್ಯಾಯಾಲಯದಲ್ಲಿ ಆಗಿದೆ ಎಂದರೆ ಸರಿ. ಮದುವೆಯು ಅವರವರ ಖರ್ಚಿನಂತೆ ಆಗಿದೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ತಂದೆ ಮನೆಯಿಂದ ಜಮೀನನ್ನು ಪಡೆದು ಮಾರಾಟ ಮಾಡಿ ಹಣ ತರುವಂತೆ ಒತ್ತಾಯ ಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ದೂರನ್ನು 3 ತಿಂಗಳ ಮೊದಲೇ ತಯಾರು ಮಾಡಿ ಇಟ್ಟುಕೊಂಡು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ದಿನಾಂಕವನ್ನು ನಮೂದಿಸಿದೇ ಅದನ್ನು ಚಾಸಾ-2 ರವರ ಮೂಲಕ ಪೋಲಿಸ್ ಠಾಣೆಗೆ ಕಳುಹಿಸಿದ್ದೇನೆ ಎಂದರೆ ಸಾಕ್ಷಿ ನನಗೆ ಶಸ್ತ್ರ ಚಿಕಿತ್ಸೆ ಆಗಿದ್ದ ಕಾರಣ ಕಾಲು ಓಡಾಡಲು ಆಗದೇ ಇದ್ದ ಕಾರಣ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಮದುವೆ ಆದ ನಂತರ ನಾನು ಮತ್ತು ಆರೋಪಿಗಳು ದೇವನಹಳ್ಳಿಯ ಕೊರವರ ಬೀದಿಯಲ್ಲಿರುವ ಬಾಡಿಗೆ ಮನೆಯಲ್ಲಿ 2017 ರವರೆಗೆ ವಾಸವಾಗಿದ್ದೆವು. ನಂತರ ಹಕ್ಕುಪೇಟೆಯಲ್ಲಿ ವಾಸವಾಗಿದ್ದೆವು. ಆ ರೀತಿ ನಾವು ಹಕ್ಕುಪೇಟೆಯಲ್ಲಿ ಚಾಸಾ-11 ರವರ ಮನೆಯಲ್ಲಿ ವಾಸವಾಗಿದ್ದೆವು. ನಿಪಿ-1 ದೂರು ನೀಡುವ ಮೊದಲೇ ನಾನು ನನ್ನ ಬಟ್ಟೆಗಳನ್ನು ತುಂಬಿಕೊಂಡು ಆಟೋದಲ್ಲಿ ಹೊರಟು

ಹೋಗಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿ ನಾವು ವಾಸವಾಗಿದ್ದ ಮನೆಯಲ್ಲಿ ಇಂದಿಗೂ ವಾಸವಾಗಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನನಗೆ ಮಕ್ಕಳಾಗಲಿಲ್ಲ ಎಂಬ ಕಾರಣದಿಂದ ಹಿಂಸೆ ನೀಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ನಮ್ಮ ಕುಟುಂಬದವರಾಗಲೀ ಆರೋಪಿಗಳಿಗೆ ಯಾವುದೇ ಒಡವೆ ವಸ್ತುಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ 2 ರಿಂದ 5 ನೇ ಆರೋಪಿಗಳು 2 ನೇ ಮದುವೆಯಾಗುವ ಬಗ್ಗೆ ಪ್ರಚೋದನೆ ನೀಡುತ್ತಿದ್ದ ಬಗ್ಗೆ ನಿಪಿ-1 ರಲ್ಲಿ ತಿಳಿಸಿರುತ್ತೇನೆ. 2 ಮತ್ತು 3 ನೇ ಆರೋಪಿ ನಮ್ಮನ್ನು ಸಾಕಿಕೊಂಡು ನಮ್ಮ ಜೊತೆ ಇರು ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನನ್ನು ರೈಲಿಗೆ ಹೋಗಿ ಸತ್ತು ಹೋಗು ಎಂಬ ವಿಚಾರವನ್ನು ನಿಪಿ-1 ರಲ್ಲಿ ತಿಳಿಸಿಲ್ಲ ಎಂದರೆ ಸರಿ. ಆರೋಪಿಗಳು ನನ್ನ ಮೇಲೆ ಇದ್ದ ಮಮಕಾರಾದಿಂದ ಮತ್ತು ಮಕ್ಕಳಾಗಲೀ ಎಂಬ ಉದ್ದೇಶದಿಂದ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ನಾಯಿಯ ತರ ಇರಬೇಕು ಎಂದು ಹೇಳಿರುವ ವಿಚಾರವನ್ನು ನಿಪಿ-1 ರಲ್ಲಿ ತಿಳಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಹೇಳಿರುವ ಎಲ್ಲಾ ವಿಚಾರಗಳನ್ನು ದೂರಿನಲ್ಲಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈಗಲೂ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ದೂರನ್ನು ದಿಃ03.09.2021 ರಂದು ಕೊಟ್ಟಿದ್ದೇನೆ. ಪಂಚನಾಮೆ ಮಾಡಿದ ದಿನಾಂಕ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ದಿಃ08.09.2021 ಇರಬಹುದು ಎಂದು ನುಡಿಯುತ್ತಾರೆ. ಮಹಜರ್ ಗೆ ನನ್ನ ತಂದೆ ತಾಯಿ ಕೃಷ್ಣಪ್ಪ ಮುರಳಿಕೃಷ್ಣ ರವರು ಸಹಿ ಮಾಡಿರುತ್ತಾರೆ. ಮಹಜರ್ ನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿದರು ಎಂದು ನನಗೆ ಗೊತ್ತಿರುವುದಿಲ್ಲ. 2 ಮತ್ತು 3 ನೇ ಆರೋಪಿಗಳು ಹೊಸೂರು ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಹೊಸೂರು ಗ್ರಾಮ 2 ಮತ್ತು 3 ನೇ ಆರೋಪಿಗಳ ಖಾಯಂ ಸ್ಥಳ ಎಂದರೆ ಸಾಕ್ಷಿ ಹೋಗಿ ಬರುತ್ತಿದ್ದರು ಎಂದು ನುಡಿಯುತ್ತಾರೆ. 4 ಮತ್ತು 5 ನೇ ಆರೋಪಿಗಳು ಪ್ರತ್ಯೇಕವಾಗಿ ವಾಸವಾಗಿದ್ದರಿಂದ ಪ್ರಚೋದನೆ ನೀಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ಮಾತು ಕೇಳಿ ಸಂಸಾರವನ್ನು ಹಾಳು ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ದೇವನಹಳ್ಳಿ.

ಈ ಹಂತದಲ್ಲಿ ಪಾಟಿ ಸವಾಲು ಮಾಡಲು ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲು ಯಾವುದೇ ಸಕಾರಣಗಳು ಇಲ್ಲದೆ ಇರುವ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು

(ಈ ಹಂತದಲ್ಲಿ ಪಾಟಿ ಸವಾಲು ಮಾಡಲು ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲು ಯಾವುದೇ ಸಕಾರಣಗಳು ಇಲ್ಲದೆ ಇರುವ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆ ಮಾಡಲು ಮಾನ್ಯ ಸಸಅ ರವರ ವಿನಂತಿಯ ಮೇರೆಗೆ ಮುಂದೂಡಲಾಯಿತು.)

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಮಾನ್ಯ ಸ.ಸ.ಅ ರವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಆರೋಪಿ ನನಗೆ ಪರಿಚಯ ಇರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಮಾನ್ಯ ಸ.ಸ.ಅ ರವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)